# ಕರ್ನಾಟಕ ಲೋಕಾಯುಕ್ತ

ಕಂಪ್ಲೆಂಟ್/ಉಪಲೋಕ್/ಬಿಜಿಎಂ/1335–2021
ಮಂಡನಾಧಿಕಾರಿಗಳ ಶಾಖೆ : ಎಆರ್‌ಇ–1

ಬಹುಮಹಡಿಗಳ ಕಟ್ಟಡ
ಡಾ. ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 16/02/2022.

19

## ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರನ್ವಯ ಶಿಫಾರಸ್ಸು ವರದಿ

**ವಿಷಯ: 1) ಶ್ರೀ ಮಹಾವೀರ ಅರಹಂತ ಯಲಗುದ್ರಿ, ಪ್ರಭಾರ ಕಂದಾಯ ನಿರೀಕ್ಷಕರು, (ಪ್ರ.ದ.ಸ.) ಮಹಾನಗರ ಪಾಲಿಕೆ, ಕಂದಾಯ ಶಾಖೆ, ಬೆಳಗಾವಿ, 2) ಶ್ರೀ ವಿನಾಯಕ ಮನೋಹರ ಮೆಣಸೆ, ಅಟೆಂಡರ್, ಮಹಾನಗರ ಪಾಲಿಕೆ, ಕಂದಾಯ ಶಾಖೆ, ಬೆಳಗಾವಿ –** ಆದ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧ ನಡವಳಿ ಕುರಿತು.

----

1. ಪೊಲೀಸ್ ಇನ್ಸ್‌ಪೆಕ್ಟರ್, ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆ, ಬೆಳಗಾವಿ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ). ಇವರು ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ, ಸದರಿ ವರದಿಯಲ್ಲಿ **1) ಶ್ರೀ ಮಹಾವೀರ ಅರಹಂತ ಯಲಗುದ್ರಿ, ಪ್ರಭಾರ ಕಂದಾಯ ನಿರೀಕ್ಷಕರು, (ಪ್ರ.ದ.ಸ.) ಮಹಾನಗರ ಪಾಲಿಕೆ, ಕಂದಾಯ ಶಾಖೆ, ಬೆಳಗಾವಿ, 2) ಶ್ರೀ ವಿನಾಯಕ ಮನೋಹರ ಮೆಣಸೆ, ಅಟೆಂಡರ್, ಮಹಾನಗರ ಪಾಲಿಕೆ, ಕಂದಾಯ ಶಾಖೆ, ಬೆಳಗಾವಿ** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ದೂರುದಾರರಾದ **ಶ್ರೀ ಅವಿನಾಶ ಚಿಂತಾಮನಿ ಧಾಮಣಕರ, ಬಿನ್ ಚಿಂತಾಮನಿ ಧಾಮಣಕರ, ನಂ: 331/ಎ, ರಾಯ ರಸ್ತೆ, ಟಿಳಕವಾಡಿ, ಬೆಳಗಾವಿ** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು, ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984, ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಂಡಿರುತ್ತಾರೆ.

2. ದೂರುದಾರರು ನೊಂದಾಯಿತ ಆರ್ಕಿಟ್ಯಾಕ್ಟ್ ಆಗಿರುತ್ತಾರೆ. ಇವರ ಪರಿಚಯಿಸ್ಥರಾದ ಶ್ರೀಮತಿ ಸುರೇಖಾ ಚಂದ್ರಶೇಖರ ಚವ್ಹಾಣ ರವರಿಗೆ ಸಂಬಂಧಪಟ್ಟ ಎಲ್ಲಾ ಕೆಲಸಗಳನ್ನು ದೂರುದಾರರೇ ಮಾಡಿಕೊಡುತ್ತಾರೆ. ಅದರಂತೆ ಶ್ರೀಮತಿ ಸುರೇಖಾ ಚಂದ್ರಶೇಖರ ಚವ್ಹಾಣ ರವರಿಗೆ ಸೇರಿದ ಪ್ಲಾಟ್ ನಂ: 101, ಕಾಮದೇನು ಅಪಾರ್ಟಮೆಂಟ್, ಸಿಬಿ 699, 1ನೇ ಪ್ಲೋರ್, ರಾಮದೇವ ಗಲ್ಲಿ, ಮಾದವಪೂರ ವಡಗಾಂವ, ಬೆಳಗಾವಿ, ಇವರ ಮನೆಯ ಕಾರ್ಪೋರೇಶನ್ ಟ್ಯಾಕ್ಸ್ ತುಂಬುವ

ಸಲುವಾಗಿ ಟ್ಯಾಕ್ಸ್ ಚಲನ್ ನೀಡಲು ಕೋರಿ ಸಂಬಂಧಪಟ್ಟ ದಾಖಲಾತಿಗಳನ್ನು ಲಗತ್ತಿಸಿ ದಿನಾಂಕ: 17.02.2018 ರಂದು ಆಯುಕ್ತರು, ಮಹಾನಗರ ಪಾಲಿಕೆ, ಬೆಳಗಾವಿಯ ಮುಖ್ಯ ಕಛೇರಿಯಲ್ಲಿ ಅರ್ಜಿ ಸಲ್ಲಿಸಿ, ಸದರಿ ಅರ್ಜಿಯ ನಕಲು ಪ್ರತಿಯನ್ನು ಖುದ್ದಾಗಿ ತೆಗೆದುಕೊಂಡು ಸಂಬಂಧಪಟ್ಟ ಕಂದಾಯ ನಿರೀಕ್ಷಕರಾದ 1ನೇ ಎದುರುದಾರರು ಮತ್ತು 2ನೇ ಎದುರುದಾರರು ರವರನ್ನು ಬೇಟಿಯಾಗಿ ನೀಡಿದಾಗ, ಸದರಿಯವರು ಅದಕ್ಕೆ ಏನಾದರು ಖರ್ಚು ಮಾಡಬೇಕಾಗುತ್ತದೆ. ಆ ಮೇಲೆ ನಿಮಗೆ ತಿಳಿಸುತ್ತೇವೆ ಬನ್ನಿ ಅಂತಾ ಹೇಳಿದ್ದರು. ದಿನಾಂಕ: 19.02.2018 ರಂದು 2ನೇ ಎದುರುದಾರರು ಸಂಜೆ 5 ಗಂಟೆಗೆ ತನ್ನ ಮೊಬೈಲ್ ಸಂ: 8951872342 ರಿಂದ ದೂರುದಾರರಿಗೆ ಪೋನ್ ಮಾಡಿ ತಮ್ಮ ಟ್ಯಾಕ್ಸ್ ಚಲನ್ ಬಗ್ಗೆ ಅಪ್ರೂವಲ್ ತೆಗೆದುಕೊಂಡಿದ್ದು, ದೂರುದಾರರು ಮೂರು ಸಾವಿರ ಕೊಡಬೇಕಾಗುತ್ತದೆ ಸಾಹೇಬರಿಗೆ, ಅಂತಾ ಹೇಳಿ ಹಣ ತೆಗೆದುಕೊಂಡು ಬರಲು ತಿಳಿಸಿರುತ್ತಾರೆ. ದೂರುದಾರರು ಸದರಿ ಸಂಭಾಷಣೆಯನ್ನು ಅವರ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಂಡು, ಲಂಚದ ಹಣ ಕೊಡಲು ಇಷ್ಟವಿಲ್ಲದಿದ್ದರಿಂದ, ಎಸಿಬಿ, ಪೊಲೀಸ್ ಉಪಾಧೀಕ್ಷಕರು, ಭ್ರಷ್ಟಾಚಾರ ನಿಗ್ರಹದಳ, ಬೆಳಗಾವಿ ಇವರಿಗೆ ದೂರು ನೀಡಿದ್ದು, ಲಂಚದ ಬೇಡಿಕೆಯ ಸಂಭಾಷಣೆ ಇದ್ದ ಮೊಬೈಲ್‌ನ್ನು ಹಾಜರುಪಡಿಸಿರುತ್ತಾರೆ. ಈ ಸಂಬಂಧವಾಗಿ ಮೊ.ಸಂಖ್ಯೆ: 02/2018 ರಲ್ಲಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988 ಕಲಂ 7 ಅಡಿಯಲ್ಲಿ ಪ್ರಕರಣ ದಾಖಲು ಮಾಡಿರುತ್ತಾರೆ.

3. ದಿನಾಂಕ: 20.02.2018ರಂದು, ತನಿಖಾಧಿಕಾರಿಯವರು ಪಂಚರಾದ ಶ್ರೀ ಮಾರುತಿ ರಾಮಪ್ಪಾ ಬೊಂಬ್ರಿ, ಪಂಚ–1, ಶ್ರೀ ಶರಣಪ್ಪ ಪರಪ್ಪ ಹೊನ್ನಳ್ಳಿ, ಪಂಚ–2, ಇವರನ್ನು ಬರಮಾಡಿಕೊಂಡು, ದೂರುದಾರರನ್ನು ಪರಿಚಯಿಸಿ, ದೂರಿನ ವಿಚಾರವನ್ನು ತಿಳಿಸಿ, ದೂರುದಾರರು ಎದುರುದಾರರಿಗೆ ಕೊಡಲು ತಂದಿದ್ದ ಲಂಚದ ಹಣ 3000/– (ಹಣದ ಡಿನಾಮಿನೇಷನ್ 2000/– x 1, 500 x 1, 100 x 5) ಗಳನ್ನು ಹಾಗೂ ಲಂಚದ ಹಣಕ್ಕೆ ಬೇಡಿಕೆ ಇಟ್ಟ ಸಂಭಾಷಣೆ ದಾಖಲಾಗಿದ್ದ ಮೊಬೈಲ್‌ನ್ನು ಹಾಜರುಪಡಿಸಿರುತ್ತಾರೆ. ಪಂಚ–2 ರವರು ಹಣದ ಮೌಲ್ಯ ಮತ್ತು ನಂಬರುಗಳನ್ನು ಹೇಳಿದಂತೆ ಪಂಚ–1 ಹಾಳೆಯಲ್ಲಿ ದಾಖಲಿಸಿರುತ್ತಾರೆ. ನಂತರ ತನಿಖಾಧಿಕಾರಿಯವರ ಸೂಚನೆ ಮೇರೆಗೆ ಪಂಚ–2 ರವರು, ಪೊಲೀಸ್ ಸಿಬ್ಬಂದಿಯಿಂದ ಫಿನಾಪ್ತಿಲೀನ್ ಪೌಡರ್ ಲೇಪಿಸಿದ 3000/– ರೂ.ಗಳ ಹಣವನ್ನು ಎಣಿಸಿ, ದೂರುದಾರರ ಶರ್ಟಿನ ಬಲಗಡೆ ಜೇಬಿನಲ್ಲಿ ಇಟ್ಟಿರುತ್ತಾರೆ. ತನಿಖಾಧಿಕಾರಿಯವರು, ಎದುರುದಾರರು ಲಂಚದ ಹಣಕ್ಕೆ ಬೇಡಿಕೆ ಇಟ್ಟ ಬಗ್ಗೆ, ದೂರುದಾರರ ಮೊಬೈಲ್‌ನಲ್ಲಿ ರೆಕಾರ್ಡ್ ಆಗಿದ್ದ, 02 ಧ್ವನಿ ಮುದ್ರಣಗಳನ್ನು ಪ್ರತ್ಯೇಕವಾಗಿ ಪ್ಲೇ ಮಾಡಿ ಪಂಚರುಗಳಿಗೆ ಕೇಳಿಸಿರುತ್ತಾರೆ. ನಂತರ ತನಿಖಾಧಿಕಾರಿಯವರು ದೂರುದಾರರಿಗೆ ನಿಗದಿತ ಸೂಚನೆಯನ್ನು ನೀಡಿ, ಎದುರುದಾರರು ಲಂಚದ ಹಣವನ್ನು ಕೇಳಿ ಪಡೆದಾಗ, ದೂರುದಾರರು ತನ್ನ ಪ್ಯಾಂಟಿನ ಹಿಂದಿನ ಎಡಜೇಬಿನಲ್ಲಿರುವ ಕರವಸ್ತ್ರವನ್ನು ತೆಗೆದು ಮುಖ ಒರೆಸಿಕೊಳ್ಳುವ ಮೂಲಕ ಸೂಚನೆ ನೀಡಬೇಕೆಂದು ತಿಳಿಸಿರುತ್ತಾರೆ ಹಾಗೂ ಇವರ ಜೊತೆ ನೆರಳು ಸಾಕ್ಷಿ ಪಂಚ–1 ಶ್ರೀ ಮಾರುತಿ ರಾಮಪ್ಪಾ ಬೊಂಬ್ರಿ, ಇವರು ದೂರುದಾರರ ಜೊತೆಗೆ ಇದ್ದು, ಘಟನೆಯನ್ನು ಗಮನಿಸಬೇಕೆಂದು ತಿಳಿಸಿರುತ್ತಾರೆ ಹಾಗೂ ತನಿಖಾಧಿಕಾರಿಯವರು ದೂರುದಾರರಿಗೆ

ಒಂದು ಸೋನಿ ವಾಯ್ಸ್ ರೆಕಾರ್ಡ್‌ರನ್ನು ದೂರುದಾರರಿಗೆ ಕೊಟ್ಟು ಉಪಯೋಗಿಸುವ ವಿಧಾನವನ್ನು ತಿಳಿಸಿಕೊಟ್ಟಿರುತ್ತಾರೆ. ಈ ಸಂಬಂಧವಾಗಿ ತನಿಖಾಧಿಕಾರಿ ವಹಿಸುವಿಕೆ ಪಂಚನಾಮೆಯನ್ನು ಪಂಚರ ಸಮಕ್ಷಮ ದಿ: 15/9/2017ರಂದು 13.30 ರಿಂದ ಮಧ್ಯಾಹ್ನ 15.00 ಘಂಟೆಯವರೆಗೆ ಬರೆದಿರುತ್ತಾರೆ.

4. ದಿನಾಂಕ: 15-09-2017 ರಂದು ತನಿಖಾಧಿಕಾರಿ, ಸಿಬ್ಬಂದಿ, ದೂರುದಾರರು, ಇವರುಗಳು ಎದುರುದಾರರು ಕರ್ತವ್ಯ ನಿರ್ವಹಿಸುವ ಬೆಳಗಾವಿಯ ಕಚೇರಿಯ ಬಳಿ 15.20ಕ್ಕೆ ಗಂಟೆಗೆ ಬಂದಿರುತ್ತಾರೆ. ನಂತರ ದೂರುದಾರರು, ಪಂಚ-1 ರವರ ಜೊತೆ ಎದುರುದಾರರನ್ನು ಭೇಟಿ ಮಾಡಿ, ತನ್ನ ಚಲನ್ ಆಗಿದೆಯೇ ಎಂದು ಕೇಳಿದಾಗ, ಅವರು ಅಲಮೇರಾದಿಂದ ಚಲನ್ ತೆಗೆದು ದೂರುದಾರರಿಗೆ ನೀಡಿ, ಹಣ ಕೊಡುವಂತೆ ಕೈ ಸನ್ನೆ ಮಾಡಿದರು. ಆಗ ದೂರುದಾರರು ಅವರು ಹೇಳಿದ್ದಾರೆಂದು (2ನೇ ಎದುರುದಾರರು) ಹೇಳಿದಾಗ, 1ನೇ ಎದುರುದಾರರು "ಹೇಳಿದ್ದಾರೆಯೇ ನೀವು ಕೊಟ್ಟು ಬಿಡಿ ನಡೆಯುತ್ತದೆ" ಅಂತ ಹೇಳಿರುತ್ತಾರೆ. ಆಗ ದೂರುದಾರರು ನಾನು ಎಲ್ಲಿ ಕೊಡಲಿ ಅಂತ ಕೇಳಿದಾಗ, 1ನೇ ಎದುರುದಾರರು ತನ್ನ ಕಡೆ ಕೊಡಿ ಅಂತ ಕೇಳಿದಾಗ, ದೂರುದಾರರು ತನ್ನ ಬಳಿ ಇದ್ದ ಪಿನಾಫ್ತಲಿನ್ ಪೌಡರ್ ಲೇಪಿತ ಹಣವನ್ನು 1ನೇ ಎದುರುದಾರರಿಗೆ ನೀಡಿದ್ದು, ಅವರು ತಮ್ಮ ಬಲಗೈಯಿಂದ ಪಡೆದು, ಎರಡೂ ಕೈಗಳಿಂದ ಎಣಿಸಿ ತಮ್ಮ ಬಲಗಡೆ ಇರುವ ಟ್ರೆಜರಿಯಲ್ಲಿ ಇಟ್ಟಿರುತ್ತಾರೆ. ನಂತರ, ದೂರುದಾರರು ನಿಗದಿತ ಸೂಚನೆಯನ್ನು 15.25ಕ್ಕೆ ತನಿಖಾಧಿಕಾರಿಯವರಿಗೆ ನೀಡಿರುತ್ತಾರೆ. ನಂತರ, ತನಿಖಾಧಿಕಾರಿಯವರು ದೂರುದಾರರ ಸೂಚನೆಯನ್ನು ಅನುಸರಿಸಿ, ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ಬಂದಾಗ, ದೂರುದಾರರು 1ನೇ ಎದುರುದಾರರನ್ನು ತೋರಿಸಿ ಕೊಟ್ಟಿರುತ್ತಾರೆ. ನಂತರ ತನಿಖಾಧಿಕಾರಿಯವರು 1ನೇ ಎದುರುದಾರರನ್ನು ಪರಿಚಯಿಸಿಕೊಂಡು ಪ್ರಕರಣ ದಾಖಲಾಗಿರುವುದರ ಬಗ್ಗೆ ತಿಳಿಸಿರುತ್ತಾರೆ. ಹಾಗೂ 2ನೇ ಎದುರುದಾರರನ್ನು 1ನೇ ಎದುರುದಾರರಿಂದ ಮೊಬೈಲ್ ಮೂಲಕ ಪೋನ್ ಮಾಡಿಸಿ ಕರೆಸಿಕೊಂಡಿರುತ್ತಾರೆ. ದೂರುದಾರರು 2ನೇ ಎದುರುದಾರರನ್ನು ತನಿಖಾಧಿಕಾರಿಗೆ ಪರಿಚಯಿಸಿರುತ್ತಾರೆ. ನಂತರ ತನಿಖಾಧಿಕಾರಿಯವರು ತನಿಖೆಯನ್ನು ಮುಂದುವರೆಸಿ, 1ನೇ ಎದುರುದಾರರ ಎರಡೂ ಕೈಬೆರಳುಗಳನ್ನು ಪ್ರತ್ಯೇಕವಾಗಿ ಸೋಡಿಯಂ ಕಾರ್ಬೋನೇಟ್ ದ್ರಾವಣದಿಂದ ತೊಳೆದಾಗ ತಿಳಿಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. ನಂತರ, ತನಿಖಾಧಿಕಾರಿಯವರ ಸೂಚನೆ ಮೇರೆಗೆ, 1ನೇ ಎದುರುದಾರರು ಹಾಜರುಪಡಿಸಿದ ಲಂಚದ ಹಣವನ್ನು ಪಂಚ-1 ರವರು ಪರಿಶೀಲಿಸಿ, ಖಾತ್ರಿಪಡಿಸಿಕೊಂಡಿರುತ್ತಾರೆ. ನಂತರ ಎದುರುದಾರರು ಲಂಚದ ಹಣ ಇಟ್ಟಿದ ಸ್ಥಳವನ್ನು ಸ್ವಚ್ಚವಾದ ಹತ್ತಿಯ ತುಂಡಿನಿಂದ ಹೊರೆಸಿ ಅದನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಿಂದ ತೊಳೆದಾಗ, ದ್ರಾವಣವು ತಿಳಿಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. ನಂತರ, ಹತ್ತಿಯನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ, ತನಿಖಾಧಿಕಾರಿಯವರು 1ನೇ ಎದುರುದಾರರನ್ನು ವಿಚಾರಿಸಿದಾಗ ಆತನು ತನ್ನ ಸಮಜಾಯಿಷಿಯನ್ನು "I Sri. Mahaveer A Yalagudri, FDA request you sir that one of the applicant Smt Surekha Chandrashekar

Chavan has submitted the application on 16/2/2018 for payment of 2016-2018 property tax and I have given challan to the concerned neighbor for payment of challan and the party given me Rs.3000/- to pay the challan of concerned applicant Smt. Surekha C. Chavan. The party told me to give the Xerox copy of the challan of before payment. The party took the challan from me for Xerox purpose suddenly the P.I. Anti Corruption Bearue sir Attached me" ಹಾಗೂ 2ನೇ ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ " I undersigned V.M.Mense I had talk to Chandrashekar Chanas to payee Challan amount for year 2016-2018 Rs.3000/- as per seniors direction I told to Ms. Chavan to pay amount" ಎಂದು ಹೇಳಿರುತ್ತಾರೆ. ಈ ಬಗ್ಗೆ ತನಿಖಾಧಿಕಾರಿ ದೂರುದಾರರನ್ನು ಹಾಗೂ ಪಂಚ-1 ರವರನ್ನು ವಿಚಾರಿಸಿದಾಗ ಎದುರುದಾರರೂ ಇಬ್ಬರು ಸುಳ್ಳು ಬರೆದುಕೊಟ್ಟಿರುತ್ತಾರೆಂದು ತಿಳಿಸಿರುತ್ತಾರೆ. ತನಿಖಾಧಿಕಾರಿ ಈ ಸಂಬಂಧವಾಗಿ ದಿನಾಂಕ: 20-02-2018 ರಂದು 15.25 ರಿಂದ 20.00 ಗಂಟೆಯವರೆಗೆ ಬೆಳಗಾವಿ ಗೋವಾವೇಸ್‌ನ ಕಾರ್ಪೋರೇಶನ್ ಕಾಂಪ್ಲೇಕ್ಸ್ ಒಂದನೇ ಮಹಡಿಯಲ್ಲಿರುವ ಮಹಾನಗರ ಪಾಲಿಕೆಯ ಕಚೇರಿಯಲ್ಲಿ ಬರೆದಿರುತ್ತಾರೆ. ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. 1 ಮತ್ತು 2ನೇ ಎದುರುದಾರರನ್ನು ಅಂದೇ ದಸ್ತಗಿರಿ ಮಾಡಿರುತ್ತಾರೆ.

5. ತನಿಖಾಧಿಕಾರಿಯವರು, ಸಿಡಿಗಳಲ್ಲಿ ದಾಖಲಾದ ಸಂಭಾಷಣೆ ದೂರುದಾರರ ಹಾಗೂ 1 ಮತ್ತು 2ನೇ ಎದುರುದಾರರ ಧ್ವನಿಗೆ ಹಾಗೂ 1 ಮತ್ತು 2ನೇ ಎದುರುದಾರರ ಮಾದರಿ ಧ್ವನಿಗೆ ಹೋಲಿಕೆ ಸಂಬಂಧವಾಗಿ ವರದಿಯನ್ನು ಕೋರಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿರುತ್ತಾರೆ.

6. ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ಎದುರುದಾರರಿಂದ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೆ ಮಾಲುಗಳಲ್ಲಿ ಫಿನಾಪ್ತಿಲೀನ್ ಅಂಶ ಇರುವುದು ದೃಢಪಟ್ಟಿದೆ.

7. ಎದುರುದಾರರಿಗೆ ದಿ: 13/09/2021 ರಂದು ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ / ವಿವರಣೆಯನ್ನು ಕೇಳಲಾಗಿದ್ದು, 1 ಮತ್ತು 2ನೇ ಎದುರುದಾರರು ತನ್ನ ವಿವರಣೆಯನ್ನು ದಿ: 18/10/2021 ರಂದು ಸಲ್ಲಿಸಿರುತ್ತಾರೆ. ಸದರಿ ವಿವರಣೆಯನ್ನು ಪರಿಶೀಲಿಸಲಾಗಿ, 1ನೇ ಎದುರುದಾರರು ತಮ್ಮ ವಿವರಣೆಯಲ್ಲಿ ಪರಿವೀಕ್ಷಣಾ ಟಿಪ್ಪಣಿಯ ಕಂಡಿಕೆ 1ರಲ್ಲಿರುವ ಅಂಶಗಳನ್ನು ಅಲ್ಲಗಳೆದಿರುತ್ತಾರೆ ಹಾಗೂ ದೂರುದಾರರು ತನ್ನ ವಿರುದ್ಧ ಸುಳ್ಳು ದೂರನ್ನು ನೀಡಿರುತ್ತಾರೆಂದು ಹೇಳಿರುತ್ತಾರೆ ಹಾಗೂ ಪರಿವೀಕ್ಷಣಾ ಟಿಪ್ಪಣಿಯ ಕಂಡಿಕೆ 2(i) ರಿಂದ (viii) ರ ಅಂಶಗಳನ್ನು ಸಾರಸಗಟಾಗಿ ಅಲ್ಲಗಳೆದಿರುತ್ತಾರೆ. ಹಾಗೂ ತಾನು ಯಾವುದೇ ಕರ್ತವ್ಯ ಲೋಪ

ಮಾಡಿರುವುದಿಲ್ಲವೆಂದು ಹೇಳಿರುತ್ತಾರೆ. ಹಾಗೂ ತನ್ನ ವಿರುದ್ಧ ಈಗಾಗಲೇ ಸದರಿ ಆಪಾದನೆಗಳಿಗೆ ಸಂಬಂಧಪಟ್ಟಂತೆ ಶಿಸ್ತು ಪ್ರಾಧಿಕಾರವು ಸಂಖ್ಯೆ : 23975/ಡಿಎಂಎ 33ಸಿಇಎನ್‌ಕ್ಯೂ 2017/18 ಮತ್ತು ನಂ: ಹೆಚ್.ಡಿ.ಎಂ.ಸಿ/20/03/ಎಫ್.ಎಸ್/21-22/1239 ದಿನಾಂಕ: 16/04/2021 ರಂತೆ ಇಲಾಖಾ ವಿಚಾರಣೆಯನ್ನು ಪ್ರಾರಂಭಿಸಿರುತ್ತದೆ. ಹಾಗಾಗಿ ಮತ್ತೊಮ್ಮೆ ಇಲಾಖಾ ವಿಚಾರಣೆಯನ್ನು ಮಾಡಬಾರದಾಗಿ ಕೋರಿರುತ್ತಾರೆ. ಹಾಗೂ 2ನೇ ಎದುರುದಾರರು ತಮ್ಮ ವಿವರಣೆಯಲ್ಲಿ ಪರಿವೀಕ್ಷಣಾ ಟಿಪ್ಪಣಿಯ ಕಂಡಿಕೆ 1ರಲ್ಲಿರುವ ಅಂಶಗಳನ್ನು ಅಲ್ಲಗಳೆದಿರುತ್ತಾರೆ ಹಾಗೂ ದೂರುದಾರರು ತನ್ನ ವಿರುದ್ಧ ಸುಳ್ಳು ದೂರನ್ನು ನೀಡಿರುತ್ತಾರೆಂದು ಹೇಳಿರುತ್ತಾರೆ ಹಾಗೂ ಪರಿವೀಕ್ಷಣಾ ಟಿಪ್ಪಣಿಯ ಕಂಡಿಕೆ 2(i) ರಿಂದ (viii)ರ ಅಂಶಗಳನ್ನು ಸಾರಸಗಟಾಗಿ ಅಲ್ಲಗಳೆದಿರುತ್ತಾರೆ. ಹಾಗೂ ತಾನು ಯಾವುದೇ ಕರ್ತವ್ಯ ಲೋಪ ಮಾಡಿರುವುದಿಲ್ಲವೆಂದು ಹೇಳಿರುತ್ತಾರೆ. ಹಾಗೂ ತನ್ನ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಬಿಡಲಾಗಿದೆ ಎಂದು ತಿಳಿಸಿರುತ್ತಾರೆ. ತಾನು ಬೆಳಗಾವಿ ಮಹಾನಗರ ಪಾಲಿಕೆಯಲ್ಲಿ ಅಟೆಂಡರ್ ಆಗಿ ಕೆಲಸ ಮಾಡುತ್ತಿರುವುದನ್ನು ಒಪ್ಪಿಕೊಂಡಿರುತ್ತಾರೆ. ಹಾಗಾಗಿ ತನ್ನ ಇಲಾಖಾ ವಿಚಾರಣೆಯನ್ನು ಕೈಬಿಡಬೇಕೆಂದು ಕೋರಿರುತ್ತಾರೆ. 1 ಮತ್ತು 2ನೇ ಎದುರುದಾರರು ನೀಡಿರುವ ಸಮಜಾಯಿಷಿಕೆಯನ್ನು ಈ ಹಂತದಲ್ಲಿ ಪರಿಗಣಿಸಲು ಬರುವುದಿಲ್ಲ ಹಾಗೂ ಯಾವುದೇ ದಾಖಲೆಗಳನ್ನು ಸಹಿತ ಹಾಜರುಪಡಿಸಿರುವುದಿಲ್ಲ, ಹಾಗಾಗಿ ಅವರ ವಿರುದ್ಧ ಇಲಾಖಾ ವಿಚಾರಣೆ ಮಾಡದೆ ಇರಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ. ಸಾಕ್ಷಿದಾರರ ಹೇಳಿಕೆಗಳು ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳಿಂದ ಮೇಲ್ನೋಟಕ್ಕೆ ದುರ್ನಡತೆ ಕಂಡು ಬರುತ್ತದೆ.

8. ಕಡತದಲ್ಲಿರುವ ಸಂಗತಿಗಳು ಹಾಗೂ ದಾಖಲಾತಿಗಳಿಂದ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ತೋರಿಸದೆ, ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವತನೆ / ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

9. ಈ ಮೇಲ್ಕಂಡ ಅಂಶಗಳನ್ನು ಮತ್ತು ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ, 1ನೇ ಮತ್ತು 2ನೇ ಎದುರುದಾರರುಗಳು ತಮ್ಮ ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆಯನ್ನು ಪಾಲಿಸದೇ, ಕರ್ತವ್ಯ ಶ್ರದ್ದೆಯನ್ನು ಹೊಂದಿರದೆ, ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸುತ್ತ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 2021) ನಿಯಮ 3(1) (i) ರಿಂದ (iii) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

10. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

19/2/22

(ನ್ಯಾಯಮೂರ್ತಿ ಬಿ.ಎಸ್.ಪಾಟೀಲ್)
ಉಪಲೋಕಾಯುಕ್ತರು-1
ಕರ್ನಾಟಕ ರಾಜ್ಯ, ಬೆಂಗಳೂರು